# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕೇಂದ್ರ

ಪತ್ರಿಕೆಯ ಹೆಸರು : NAME OF THE NEWS PAPER : ಉದಯವಾಣಿ ದಿನಾಂಕ : DATE : 3/11/2019

# ಹೊಸ ಭೂಪಟದಲ್ಲಿ ಲಡಾಖ್ ವ್ಯಾಪ್ತಿಗೆ ಪಿಓಕೆ ಸೇರ್ಪಡೆ

ಉದಯ 3/11/19




- ಸರ್ವೆ ಜನರಲ್ ಆಫ್ ಇಂಡಿಯಾ ದಿಂದ ಮ್ಯಾಪ್
- ಈಗ ದೇಶದಲ್ಲಿ 9 ಕೇಂದ್ರಾಡಳಿತ ಪ್ರದೇಶ; 28 ರಾಜ್ಯಗಳು

**ನವದೆಹಲಿ:** ಕೇಂದ್ರ ಸರ್ಕಾರ ದೇಶದ ಹೊಸ ಭೂಪಟ ಬಿಡುಗಡೆ ಮಾಡಿದೆ. ಅದರಲ್ಲಿ ಹೊಸದಾಗಿ ರಚನೆಯಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳನ್ನು ಚಿತ್ರಿಸಲಾಗಿದೆ. ಎಲ್ಲದಕ್ಕಿಂತ ಮಹತ್ವದ ಅಂಶವೆಂದರೆ, ಕೇಂದ್ರಾಡಳಿತ ಲಡಾಖ್ ಭೂಪ್ರದೇಶಕ್ಕೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ)ವನ್ನೂ ಸೇರಿಸಲಾಗಿದೆ. ಪಿಒಕೆಯಲ್ಲಿರುವ ಮುಜಾಫರಾಬಾದ್ ಮತ್ತು ಮಿರ್‌ಪುರವನ್ನು ಹೊಸ ಭೂಪಟದಲ್ಲಿ ಚಿತ್ರಿಸಲಾಗಿದೆ. ಲಡಾಖ್ ವ್ಯಾಪ್ತಿಗೆ ಕಾರ್ಗಿಲ್ ಮತ್ತು ಲೇಹ್ ಜಿಲ್ಲೆಗಳನ್ನು ಸೇರಿಸಲಾಗಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಬಂಡೀಪೊರ, ಗಂಡರ್‌ಬಾಲ್, ಕುಪ್ವಾರಾ, ಮುಝಫರಾಬಾದ್, ಬಾರಾಮುಲ್ಲಾ, ಪೂಂಛ್, ಮೀರ್‌ಪುರ್, ರಜೌರಿ, ಜಮ್ಮು, ಸಾಂಬಾ, ಕಥುವಾ, ದೋಡಾ, ಶೋಪಿಯಾನ್, ಕುಲ್ಗಾಮ್, ರಾಮ್‌ಬನ್, ಶ್ರೀನಗರ, ಅನಂತನಾಗ್, ಪುಲ್ವಾಮಾ, ಬುದ್ಗಾಂವ್, ಕಿಶ್ತ್‌ವಾರ್, ಉಧಂಪುರ್ ಮೀರ್‌ಪುರ್, ಜಿಲ್ಲೆಗಳು ಇರಲಿವೆ. ಲಡಾಖ್ ವ್ಯಾಪ್ತಿಯಲ್ಲಿ ಗಿಲ್ಗಿಟ್, ಗಿಲ್ಗಿಟ್ ವಝೀರತ್, ಚಿಲ್ಹಾಸ್ ಮತ್ತು ಬುಡಕಟ್ಟು ಪ್ರದೇಶಗಳು ಲಡಾಖ್ ಕೇಂದ್ರಾಡಳಿತ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಲೇಹ್ ಜಿಲ್ಲೆಯಲ್ಲಿ ಸೇರಿವೆ. ಅ.31ರ ಬಳಿಕ ದೇಶದಲ್ಲಿ 28 ರಾಜ್ಯಗಳು ಮತ್ತು ಒಂಭತ್ತು ಕೇಂದ್ರಾಡಳಿತ ಪ್ರದೇಶಗಳು ಇವೆ. ಸರ್ವೇ ಜನರಲ್ ಆಫ್ ಇಂಡಿಯಾ ಈ ಭೂಪಟ ಸಿದ್ಧಗೊಳಿಸಿದೆ. ಅ.31ರಂದು ಜಗದೀಶ ಚಂದ್ರ ಮುರ್ಮು ಅವರು ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಆಗಿ, ಲಡಾಖ್‌ನ ಲೆಫ್ಟಿನೆಂಟ್ ಗವರ್ನರ್ ಆಗಿ ರಾಧಾಕೃಷ್ಣ ಮಾಥುರ್ ಪ್ರಮಾಣ ವಚನ ಸ್ವೀಕರಿಸಿದ್ದರು.

6